**ದಿಃ10.06.2019 ರಂದು   ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ  ಎಸ್ .ಎಸ್. ಬಿ  ವಕೀಲರಿಂದಃ**

ನನಗೆ ಅಯ್ಯಪ್ಪ ಎಂ.ಎಂ. ಎಂಬ ಸಹೋದರನಿಗೆ ಮದುವೆ ಆಗಿದೆ. ನನ್ನ ವಾದ ಪತ್ರದ 4 ನೇ ಪ್ಯಾರಾದಲ್ಲಿ ಎಂ.ಎಂ. ಅಯ್ಯಪ್ಪ ಎಂದು ಹೇಳಿರುವುದು ಸರಿಯಲ್ಲ. ಆದರೆ ಅವರ ಹೆಸರು ಅಪ್ಪಯ್ಯ ಎಂದು ಆಗಬೇಕಿತ್ತು.  ಸರ್ವೆ ನಂಬರ್ 196/1 ರಲ್ಲಿ  ಆರ್ ಟಿ ಸಿ ರೀತ್ಯಾ 4.50 ಎಕರೆ ಇದೆ ಎಂದರೆ ಸರಿ.  ವಾದ ಪತ್ರದಲ್ಲಿ 4.80 ಎಕರೆ ಎಂದು ತೋರಿಸಿರುವುದು ತಪ್ಪು ಎಂದರೆ ಸರಿ. ನನ್ನ ಸಹೋದರ ಸೋಮಣ್ಣ ದಿಃ8.10.2009 ರಂದು  ಮರಣ ಹೊಂದಿದ್ದಾರೆ ಎಂದರೆ ಸರಿ.  ಅವರ ಮಗಳ ಹೆಸರು ರೇಣುಕಾ ಎಂದರೆ ಸರಿ. ಅವರು ಮೈಸೂರಿನಲ್ಲಿ ವಾಸವಿದ್ದಾರೆ. ಸೋಮಣ್ಣನವರ ಮಗಳಿಗೆ ಅವರ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿ.

ಅವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 8 ನೇ ಪ್ರತಿವಾದಿಯು 9 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ನನಗೆ ಗೊತ್ತು. 9 ನೇ ಪ್ರತಿವಾದಿಯ ವಿರುದ್ದ ನಾನು ಯಾವುದೇ ಪರಿಹಾರ ಕೇಳಿಲ್ಲ.

ಸರ್ವೆ ನಂಬರ್ 211/18 ರ ಮತ್ತು ಸರ್ವೆ ನಂಬರ್ 211/19 ಆಸ್ತಿಗಳು 9 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ್ 45/1 ರಲ್ಲಿ 8.9 ಎಕರೆ ಆಸ್ತಿಯು ನಮ್ಮ ತಂದೆಗೆ ಸೇರಿದ ಆಸ್ತಿ. ಸರ್ವೆ ನಂಬರ್ 46 ರಲ್ಲಿ 3 ಎಕರೆ , ಸರ್ವೆ ನಂಬರ್ 157 ರಲ್ಲಿ 0.59 ಎಕರೆ ನಮ್ಮ ತಂದೆಗೆ ಸೇರಿದ ಆಸ್ತಿ. ಸರ್ವೆ ನಂಬರ್ 211/18 ಮತ್ತು 211/19 ರ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳಾಗಿದ್ದು, 8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ತಪ್ಪು. ಮೇಲೆ ಹೇಳಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂಬರ್ 157 ರ ಆಸ್ತಿಯು ಈಗ ಕ್ಯುಯಮುಡಿ ಎಂ ಯುವರಾಜ ಎಂಬುವವರ ಹೆಸರಿನಲ್ಲಿ ಇದೆ ಎಂದರೆ ಸರಿ. ಅವರಿಗೆ ಯಾರು ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಕಾರಣ ಸದರಿ ಆಸ್ತಿಯ ಸರ್ವೆ ನಂಬರ್ ಗೊತ್ತಿರಲಿಲ್ಲ. 8 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ.

ಸರ್ವೆ ನಂಬರ್ 200/3 ರಲ್ಲಿ 42 ಸೆಂಟ್ ಮತ್ತು ಸರ್ವೆ ನಂಬರ್ 200/4 ರಲ್ಲಿ 50 ಸೆಂಟ್ ಆಸ್ತಿಯು ಎಸ್ . ಬಾಲಕೃಷ್ಣ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಈ ಆಸ್ತಿಗಳು ನಮ್ಮ ತಂದೆಗೆ ಸೇರಿದ್ದು, 1 ನೇ ಪ್ರತಿವಾದಿಯ ಗಂಡ ದಿಃ17.9.1975 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 200/3 ಮತ್ತು ಸರ್ವೆ ನಂಬರ್ 200/4 ರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಕಾರಣ ಸರ್ವೆ ನಂಬರ್ ಗೊತ್ತಿರಲಿಲ್ಲ. ಸರ್ವೆ ನಂಬರ್ 10/3 ರ 3.34 ಎಕರೆ 1 ನೇ ಪ್ರತಿವಾದಿಯ ಗಂಡ ಕರುಂಬಯ್ಯ ಎಂಬುವವರಿಗೆ ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಕರುಂಬಯ್ಯನ ಮರಣಾನಂತರ ಅವರ ಮಗ ದಯಾನಂದ ರಾಮಕೃಷ್ಣಯ್ಯ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಮಕೃಷ್ಣಯ್ಯನವರ ಮಗನೇ ರಾಜಣ್ಣ ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಯ ಆರ್ ಟಿ ಸಿ ಯಲ್ಲಿ ಅವರ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿ ನಮ್ಮ ತಂದೆಗೆ ಸೇರಿತ್ತು ಎಂದರೆ ಸರಿ. ನಾನು ದಿಃ14.1.1992 ರಂದು ಮಾದಪ್ಪ ರವರಿಗೆ ಒಂದು ಕರಾರು ಪತ್ರವನ್ನು

ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಕರಾರಿನಲ್ಲಿ 75 ಸೆಂಟ್ ಆಸ್ತಿಯನ್ನು ಸರ್ವೆ ನಂಬರ್ 164 ಮತ್ತು 173ರಲ್ಲಿ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಈ ಆಸ್ತಿಯು ನನಗೆ ನಮ್ಮ ತಂದೆಯಿಂದ ಬಂದಿತ್ತು. ನಾನು ಕ್ರಯ ಪತ್ರವನ್ನು ಬರೆದುಕೊಟ್ಟಿಲ್ಲ. ಅವರು ಹಣ ಕೊಟ್ಟರೇ ಕರಾರನ್ನು ರದ್ದು ಪಡಿಸುತ್ತೇನೆ. ನಾನು ಹಣವನ್ನು ಮರು ಪಾವತಿ ಮಾಡಿಲ್ಲ. ಈಗಲೂ ಸಹ ಮಾದಪ್ಪನವರೆ ಈ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಸದರಿ ಕರಾರಿನಲ್ಲಿ ಈ ಆಸ್ತಿಯು ನನ್ನ ಪಾಲಿಗೆ ಬಂದ ಆಸ್ತಿ ಎಂದು ಬರೆದಿದ್ದೇನೆ ಎಂದರೆ ಸರಿ . ಆದರೆ ಅದನ್ನು ತಪ್ಪಾಗಿ ಬರೆದಿದ್ದೇನೆ. ಕರಾರಿನಲ್ಲಿ ನನ್ನ ಪಾಲಿಗೆ ಬಂದಿದ್ದು ನನ್ನ ಕುಟುಂಬದ ಒಳಿತಿಗಾಗಿ ಮತ್ತು ನನ್ನ ಪಾಲಿಗೆ ಬಂದ ಇತರ ಆಸ್ತಿಗಳಿಂದ ದೂರ ಇರುವುದರಿಂದ ಮಾರಾಟ ಮಾಡಲು ಒಪ್ಪಿದ್ದೇನೆ ಎಂದರೆ ಸರಿ. ಈ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ಮೇಲೆ ಹೇಳಿದ ದಯಾನಂದ , ಕೃಷ್ಣಯ್ಯ , ಮಾದಪ್ಪ ಮತ್ತು ಯುವರಾಜನನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂಬರ್ 45/1 ರ ಆರ್.ಟಿ.ಸಿ.ಯಲ್ಲಿ ಸುಮಾರು ಜನರ ಹೆಸರು ಇದೆ ಎಂದರೆ ಸರಿ . ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಅವರಿಗೆ ಈ ಆಸ್ತಿಯಲ್ಲಿ ಹಕ್ಕು ಇಲ್ಲ ಮತ್ತು ಅವರ ಹೆಸರನ್ನು ಆರ್.ಟಿ.ಸಿ. ಯಲ್ಲಿ ರದ್ದು ಪಡಿಸಬೇಕು. ಅಪ್ಪಚ್ಚ , ಸೋಮಯ್ಯ , ಅಯ್ಯಪ್ಪ , ಸೋಮಣ್ಣ , ಬಸಪ್ಪ , ಬೆಳ್ಳಿಯಪ್ಪ , ನಂದಕುಮಾರ್ , ಸುರೇಶ್ , ಬಾಲಚಂದ್ರ , ರವರಿಗೆ ಹಕ್ಕು ಇದೆ. ಉಳಿದವರು ಮಾರಾಟ ಮಾಡಿದ್ದಾರೆ.

ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ.ಹೇ.ಕೇ.ಸರಿ.ಇದೆ.
ಸಹಿ/-

(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.